■ ರಾಜು ಅಡಕಳ್ಳಿ
ಕಲೆ: ಸಂತೋಷ್ ಸಸಿಹಿತ್ಲು

# ಬಟ್ಟೆ ಬಿಟ್ರೆ ಲೊಳಲೊಟ್ಟೆ

ಆದಿ ಮಾನವರನ್ನೊಮ್ಮೆ ನೀವು ಕಲ್ಪಿಸಿಕೊಳ್ಳಿ. ಅವರು ಕಾಡಿನಲ್ಲಿ ಸೊಪ್ಪು ಸದೆಗಳನ್ನು ತಿನ್ನುತ್ತಿದ್ದರಷ್ಟೇ ಅಲ್ಲ, ಮೈ ಮುಚ್ಚಿಕೊಳ್ಳಲು ಆಗ ಬಟ್ಟೆಯಿಲ್ಲದೆ, ಗಿಡ ಮರಗಳ ನಾರು, ಸೊಪ್ಪುಗಳನ್ನೇ ಉಪಯೋಗಿಸುತ್ತಿದ್ದರು. ಆದರೆ ಈಗ ಬಟ್ಟೆ ಇಲ್ಲದೇ ಬದುಕುವ ಸಮಾಜವನ್ನು ಅಥವಾ ಮನುಷ್ಯನನ್ನು ಕಲ್ಪಿಸಿಕೊಳ್ಳುವುದೇ ಕಷ್ಟ. ನಾಗರಿಕ ಸಮಾಜ ಎಂದು ಗುರುತಿಸುವುದಿದ್ದರೆ ಬಟ್ಟೆ ಮನುಷ್ಯನಿಗೆ ಅತ್ಯಗತ್ಯವೇ.

ಈಗ ಬಟ್ಟೆ ಸರ್ವಾಂತರ್ಯಾಮಿ. ಮನುಷ್ಯ ಇದ್ದಲ್ಲೆಲ್ಲಾ ಬಟ್ಟೆ ಇದ್ದೇ ಇರುತ್ತದೆ. ಮನುಷ್ಯ ಚಂದ್ರಲೋಕಕ್ಕೆ ಹೋದಾಗಲೂ ಬಟ್ಟೆ ಅವನನ್ನು ಬಿಟ್ಟು ಹೋಗಲಿಲ್ಲ. ಹಾಗಂತ ಮನುಷ್ಯ ಹುಟ್ಟುವಾಗ ಹೊಟ್ಟೆ ಬಿಟ್ಟುಕೊಂಡು ಈ ಭೂಮಿಗೆ ಬರುತ್ತಾನೆಯೇ ಹೊರತು, ಬಟ್ಟೆ ಹಾಕಿಕೊಂಡೇನೂ ಹುಟ್ಟುವುದಿಲ್ಲ. ಆದರೆ ಆ ಮಗುವಿಗೆ ಬುದ್ಧಿ ಬೆಳೆದಂತೆಲ್ಲ ಬಟ್ಟೆ ಅನಿವಾರ್ಯವಾಗಿ ಆತನನ್ನು ಆಕ್ರಮಿಸಿಕೊಳ್ಳುತ್ತದೆ. ಮನುಷ್ಯನ ಹುಟ್ಟು ಮತ್ತು ಸಾವಿನ ನಡುವೆ ಬಟ್ಟೆಯದ್ದೇ ಲಾಸ್ಯ, ವಿಲಾಸ. ಆದರೆ ಪ್ರಾಣಿಗಳಿಗೆ ಬಟ್ಟೆಯ ಹಂಗೂ ಇಲ್ಲ. ಗುಂಗೂ ಇಲ್ಲ. ಮನುಷ್ಯನೆಂಬ ಪ್ರಾಣಿಗೆ ಮಾತ್ರ ಈ ಬಟ್ಟೆಯ ರಂಗು.

ಸ್ನಾನ ಮಾಡುವಾಗ ಅಥವಾ ದಂಪತಿಯ ಪ್ರಣಯದಲ್ಲೊ ಮೂರನೆಯವರು ನೋಡುತ್ತಿಲ್ಲವೆಂದಾದರೆ ಆಗ ಬಟ್ಟೆ ಇಲ್ಲದಿದ್ದರೂ ಆದೀತು. ಆದರೆ ಹೊರ ಜಗತ್ತಿನಲ್ಲಿ ಮನುಷ್ಯ ಕಾಣುವಾಗಲೆಲ್ಲ ಆತನ ರಟ್ಟೆ ಎಷ್ಟೇ ಗಟ್ಟಿಯಾಗಿದ್ದರೂ ಸಹ ಬಟ್ಟೆ ಕಾಣಿಸಲೇಬೇಕು. ಯಾರೇ ಆಗಲಿ ಬೆಟ್ಟ ಹತ್ತಿದರೂ ಬಟ್ಟೆ ಮರೆಯಲು ಸಾಧ್ಯವೇ? ಹೀಗಾಗಿಯೇ ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ... ಎಂದು ದಾಸರು ಬರೆದಿದ್ದರಲ್ಲವೇ?

ಭಾರತೀಯ ಸಮಾಜವನ್ನು ಅವಲೋಕಿಸುವಾಗ ಹಿಂದೆಲ್ಲಾ ಮಹಿಳೆಯರು ಮೈತುಂಬಾ ತುಂಬು ಬಟ್ಟೆಯನ್ನು ಧರಿಸುತ್ತಿದ್ದರು. ಆದರೆ ಈ ತುಂಬು ಬಟ್ಟೆ ಈಗ ಕೆಲವರಲ್ಲಿ ತುಂಡು ಬಟ್ಟೆಯಾಗಿರುವುದು ನಿಜ. ಮೈಮುಚ್ಚುವುದಕ್ಕೆ ಬಟ್ಟೆ ಬೇಕು. ಅದೇನೋ ಸರಿ. ಆದರೆ ಮೈ ತೋರಿಸುವುದಕ್ಕೂ ಬಟ್ಟೆ ಬೇಕೇ ಎಂದು ಇದರಿಂದ ಪ್ರಶ್ನೆ ಕೇಳುವಂತಾಗುತ್ತದೆ. ಮಾನಹಾನಿಯಾಗದಂತೆ ತಡೆಯುವುದು ಈ ಬಟ್ಟೆಯ ಕೆಲಸ, ಆದರೆ ಮಾನಿನಿಯರ ಬಟ್ಟೆಯ ಬಗ್ಗೆ ಮೂರನೆಯವರು ಬೆಟ್ಟು ತೋರಿಸಿದರೆ, ಮಾನಹಾನಿ ಖಟ್ಲೆ ಎದುರಿಸಬೇಕಾದ ಅಪಾಯವೂ ಬರಬಹುದು.

ಬಟ್ಟೆ ಎಂದರೆ ಮೊಟ್ಟೆ ಹಾಗೆ ಒಂದೇ ರೀತಿಯಲ್ಲಿರುವುದಿಲ್ಲ. ಬಗೆ ಬಗೆಯ ಬಣ್ಣ, ಬೆಡಗು, ಒನಪು, ವೈಯಾರ ಈ ಬಟ್ಟೆಗೆ ಇರಲೇಬೇಕು. ಪಾಪ, ಈಗ ಹುಡುಗಿಯರು ಸಾವಿರಾರು ರೂಪಾಯಿ ಖರ್ಚು ಮಾಡಿ ಬ್ಯೂಟಿ ಪಾರ್ಲರಿಗೆ ತೆರಳಿ ತಮ್ಮ ಮೈಬಣ್ಣ ಬದಲಾಯಿಸಿಕೊಳ್ಳುತ್ತಾರೆ. ಬೆನ್ನು, ಕೈ, ಭುಜಕ್ಕೆಲ್ಲ ಟ್ಯಾಟೂ ಹಾಕಿಸಿಕೊಳ್ಳುತ್ತಾರೆ. ಆಗ ಹಳ್ಳಿ ಗೌರಮ್ಮನ ಹಾಗೆ ಮೈತುಂಬ ಜರಿ ಸೀರೆ ಉಟ್ಟುಕೊಂಡರೆ ಈ ಸೌಂದರ್ಯವನ್ನೆಲ್ಲ ಬೇರೆಯವರಿಗೆ ತೋರಿಸುವುದಾದರೂ ಹೇಗೆ? ಮೈ ಚೆಂದ ಸುಮ್ನೆ ವೇಸ್ಟ್ ಆಗಬಾರದಲ್ಲವೇ ಎಂದು ಅವರು ಕೇಳಿದರೆ ಉತ್ತರಿಸುವುದು ತುಸು ಕಷ್ಟವೇ.

‘ರಾಮ್ ತೇರಿ ಗಂಗಾ ಮೈಲಿ’ ಎಂಬ ಹಿಂದಿ ಸಿನಿಮಾದಲ್ಲಿ ನಟಿ ಮಂದಾಕಿನಿ ಬಟ್ಟೆ ಬಿಚ್ಚುತ್ತ ಬಿಚ್ಚುತ್ತಾ, ರಾಮ್ ತೇರಿ ಗಂಗಾ ಬರಿ ಮೈಲಿ ಎನ್ನುವಂತೆ ನಟಿಸಿರಲಿಲ್ಲವೇ? ಕೆಲವು ಹೆಣ್ಣು ಮಕ್ಕಳ ಬಟ್ಟೆಯನ್ನು ನೋಡುವಾಗ ಶ್ರೀಮಂತಿಕೆಯ ಲಕ್ಷಣವಾಗಿ ಕಂಡರೆ, ಇನ್ನೂ ಕೆಲವರು ಎದುರಾದರೆ ಈ ಶ್ರೀಮಂತರಿಗೆ ಲಕ್ಷಣವಾಗಿ ಬಟ್ಟೆ ಖರೀದಿಸುವುದಕ್ಕೂ ದುಡ್ಡಿಲ್ಲವೇ ಎಂಬ ಸಂದೇಹ ಮೂಡುವಂತಾಗುತ್ತದೆ. ಬಟ್ಟೆ ಸಭ್ಯತೆಯ ಸಲ್ಲಕ್ಷಣವೂ ಹೌದು. ಆದರೆ ಈ ಬಟ್ಟೆಯ ತಂಟೆಗೆ ಹೋದರೆ ಕೆಲವೊಮ್ಮೆ ಬದುಕು ಲೊಳಲೊಟ್ಟೆಯಾಗಬಹುದು ಎಂಬುದು ಮಹಾಭಾರತದಲ್ಲೂ ಸಾಬೀತಾಗಿದೆ. ಅಣ್ಣ ದುರ್ಯೋಧನನ ಮಾತನ್ನು ಕೇಳಿ ದುಶ್ಯಾಸನ ದ್ರೌಪದಿಯ ಬಟ್ಟೆ ಸೆಳೆಯಲು ಮುಂದಾಗಿ ಮುಖಭಂಗ ಅನುಭವಿಸಿದ್ದನಲ್ಲವೇ?

ಹಾಗೆ ನೋಡಿದರೆ ಗಂಡಸರ ಪಾಲಿಗೆ ಬಟ್ಟೆ ಸಹನೆ ಕಲಿಸುವ ಜೀವನ ಪಾಠ, ಏಕೆಂದರೆ ಹೆಂಡತಿಯನ್ನು ಸೀರೆ ಅಂಗಡಿಗೆ ಕರೆದುಕೊಂಡು ಹೋದಾಗ ದೂಸ್ರಾ ಮಾತಾಡದೇ, ವಾಚಿನ ಮುಳ್ಳನ್ನು ನೋಡದೇ, ಮಳ್ಳನ ಹಾಗೆ ಕೂತು ಧ್ಯಾನಸ್ಥನಾಗುವ ಅನಿವಾರ್ಯತೆ ಅನಾಯಾಸವಾಗಿ ಗಂಡಂದಿರಿಗೆ ಸಿದ್ಧಿಸುತ್ತದೆ. ಅಷ್ಟೇ ಅಲ್ಲ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಎಲ್ಲರೂ ಸಮಾನರಾಗಿದ್ದರೂ ಹೆಂಡತಿ ಇನ್ನೂ ಹೆಚ್ಚು ಸಮಾನಳು ಎಂಬುದು ಸ್ವಂತ ಅನುಭವಕ್ಕೆ ಆಗ ಬರುವಂತಾಗುತ್ತದೆ. ಗಂಡಸರಿಗೆ ಗುಂಡು ಖರೀದಿಸಲು ಏನಾದರೂ ಒಂದು ನೆಪ ಸಿಗುವಂತೆ, ಹೆಂಗಸರಿಗೆ ಬಟ್ಟೆ ಖರೀದಿಸಲು ಏನಾದರೂ ನೆಪ ಆಗಾಗ ಸಿಕ್ಕೇ ಸಿಗುತ್ತದೆ.

ಒಮ್ಮೆ ಹಾಗೇ ಆಯಿತು. ನನ್ನ ಹೆಂಡತಿ ದುಬೈಗೆ ಹೋಗಬೇಕೆಂದು ತಯಾರಿ ನಡೆಸುವಾಗ ಒಂದಷ್ಟು ಹೊಸ ಬಟ್ಟೆ ಖರೀದಿಸಿ ತಂದಳು. ಮುಂದೆ ದುಬೈಗೆ ಹೋದಾಗಲೂ ಅಲ್ಲಿಯ ಶಾಪಿಂಗ್ ಮಾಲಿನಿಂದ ಮತ್ತಷ್ಟು ಬಟ್ಟೆ ತಂದಳು. ಹೀಗೆ ವಿದೇಶಕ್ಕೆ ಹೋಗುವಾಗಲೂ ಮತ್ತು ಅಲ್ಲಿಂದ ಬರುವಾಗಲೂ ಹೊಸ ಬಟ್ಟೆಗಳದ್ದೇ ಹೊಸ ಖದರು. ಇದನ್ನು ಪ್ರಶ್ನಿಸಹೋದೆ. ನೀವು ಗುಂಡು ಖರೀದಿಸುವುದಕ್ಕೆ

